ದಿನಾಂಕ 22-07-2015ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿಜಿಎಸ್ ವಕೀಲರಿಂದ

ಈ ದಾವೆ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವೆಯಲ್ಲಿ ಪ್ರತಿರಕ್ಷಣೆಯನ್ನು ಕೇವಲ 2ನೇ ಪ್ರತಿವಾದಿ ಸಲ್ಲಿಸಿರುತ್ತಾರೆ ಎಂದರೆ ಸರಿ. 1ನೇ ಮತ್ತು 3ನೇ ಪ್ರತಿವಾದಿಯವರೊಂದಿಗೆ ನಾನು ವಿಶ್ವಾಸದಿಂದ ಇದ್ದೇನೆ. ಅವರು ನಾವು ಹೋಗಿ ಬಂದು ಮಾಡುತ್ತಿದ್ದೇವೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಅವರಿಗೆ ದಾವೆ ಹೂಡುವುದು ಗೊತ್ತಿತ್ತು. ಅವರೇನು ದಾವೆ ಸಲ್ಲಿಸುವುದು ಬೇಡವೆಂದು ಹೇಳಿರುವುದಿಲ್ಲ. ಏಕೆ ಪಕ್ಷಕಾರನ್ನಾಗಿ ಮಾಡಿರುತ್ತೇವೆಂದು ನನಗೆ ಗೊತ್ತಿಲ್ಲ. ನಾನೇನು ವಕೀಲರಿಗೆ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಎಂದು ಮಾಹಿತಿ ನೀಡಿಲ್ಲ. 2ನೇ ಪ್ರತಿವಾದಿ ಶ್ಯಾಮ್‌ಭಟ್ ನನ್ನ ಹಿರಿಯ ಸಹೋದರ. ಅವರಿಗೂ ಹಿರಿಯ ಸಹೋದರ ಕೃಷ್ಣ ಭಟ್. ಅವರು

ನಮ್ಮೊಂದಿಗೆ ಇದ್ದಾರೆ. ಶ್ಯಾಮ್‌ಭಟ್‌ರವರು ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ಡೆಮೊನ್‌ಸ್ಟ್ರೇಟ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಯಾವ ವರ್ಷದಿಂದ ಆ ಕೆಲಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ. 1960ರಲ್ಲಿ ಅವರು ಮಣಿಪಾಲದ ಎಂಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ನೆನಪಿಲ್ಲ. ಅವರು ಎಂದು ಕೆಲಸಕ್ಕೆ ಸೇರಿರುತ್ತಾರೆಂದು ನನಗೆ ಗೊತ್ತಿಲ್ಲ. ಅವರು ಯಾವ ಯಾವ ಸಂಸ್ಥೆಗಳಲ್ಲಿ ಎಷ್ಟು ಎಷ್ಟು ಯಾವ ಯಾವ ಕೆಲಸಗಳನ್ನು ನಿರ್ವಹಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಆದಕಾರ ನನಗೆ ಅವರಿಗೆ ಎಷ್ಟೆಷ್ಟು ಸಂಬಳ ಬರುತ್ತಿತ್ತು ಎಂದು ಹೇಳಲಾಗುವುದಿಲ್ಲವೆಂದರೆ ಸರಿ.

ನಾನು 1979ರಿಂದ ವೈದ್ಯ ವೃತ್ತಿಯಲ್ಲಿದ್ದೇನೆ. ನನ್ನ ಖಾಯಂ ವಾಸ್ತವ್ಯ ಮೈಸೂರಿನಲ್ಲಿ. ನಾನು ಅಲ್ಲಿ 2005ರಲ್ಲಿ ಮನೆ ಕಟ್ಟಿರುತ್ತೇನೆ. ಮನೆ ಕಟ್ಟಿರುವ ನಿವೇಶನ ಅಲ್ಲದೆ ಬೇರೆ ಒಂದು ನಿವೇಶನ ಇದೆ. ನಾನು ಆದಾಯ ತೆರಿಗೆ ಪಾವತಿದಾರ. ಈ ಬಗ್ಗೆ ದಾಖಲೆಗಳಲ್ಲಿ ನನ್ನ ಅದಾಯ ಬಗ್ಗೆ ಮಾಹಿತಿ ಇರುತ್ತದೆ. 5ನೇ ಪ್ರತಿವಾದಿ 20 ವರ್ಷದ ಹಿಂದೆ ದೋಹ ಕತ್ತಾರ್ ವಿದೇಶಕ್ಕೆ ಹೋಗಿರುತ್ತಾರೆ. ಅವರಿಗೂ ಸಹ ಮೈಸೂರಿನಲ್ಲಿ ಮನೆ, ನಿವೇಶನ ಇದೆ. ಬೆಂಗಳೂರಿನಲ್ಲಿ ಇದ್ದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮಹಾಬಲೇಶ್ ಭಟ್‌ರವರ ಖಾಯಂ ವಾಸ ಈಗ ಬೆಂಗಳೂರಿನಲ್ಲಿ. 2006-07ರಲ್ಲಿ ಅವರು ಬೆಂಗಳೂರಿಗೆ ಹೋಗಿರಬಹುದು. ಅಲ್ಲಿ ಅವರಿಗೆ 3 ಮಹಡಿಗಳ ಕಟ್ಟಡವಿದೆ ಎಂದರೆ ಸರಿಯಲ್ಲ. ಅವರು ತಮ್ಮ ಮಕ್ಕಳೊಂದಿಗೆ ವಾಸವಿದ್ದಾರೆ. ಮನೆ ಅವರ ಮಕ್ಕಳ ಹೆಸರಿನಲ್ಲಿದೆ. ಇವರಿಗೆ ಪುತ್ತೂರಿನಲ್ಲಿ ನಿವೇಶನ ಇಲ್ಲ. 2ನೇ ವಾದಿ ರಾಮಚಂದ್ರ ಭಟ್ ಉಡುಪಿಯಲ್ಲಿ ವಾಸವಿದ್ದಾರೆ ಅಲ್ಲಿ ಅವರಿಗೆ ಖಾಯಂ ಮನೆ ಇದೆ. ಅವರಿಗೆ ಮೈಸೂರಿನಲ್ಲಿ ಎರಡು ನಿವೇಶನ ಹಾಗೂ ಪುತ್ತೂರಿನಲ್ಲಿ ನಿವೇಶವಿದೆ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿ ಕೃಷ್ಣ ಭಟ್‌ರವರು ಮಗನ ಮನೆಯಲ್ಲಿದ್ದಾರೆ. ಅವರಿಗೆ ಮುಲ್ಕಿ ಮತ್ತು ಸುರತ್ಕಲ್‌ನಲ್ಲಿ ಭೂಮಿಗಳಿವೆ. 1ನೇ ಪ್ರತಿವಾದಿ ನರಸಿಂಹ ಭಟ್ ಕಾಸರಗೋಡಿನಲ್ಲಿರುತ್ತಾರೆ. 3ನೇ ಪ್ರತಿವಾದಿ ಪುತ್ತೂರಿನಲ್ಲಿ ವಾಸವಿದ್ದಾರೆ. 2ನೇ ಪ್ರತಿವಾದಿ ಕಲ್ಲಡ್ಕದಲ್ಲಿ ವಾಸವಿದ್ದಾರೆ. ಮಹಾಬಲೇಶ ಭಟ್‌ರವರನ್ನು

ಹೊರತುಪಡಿಸಿ ಉಳಿದ ಎಲ್ಲಾ ಸಹೋದರರಿಗೆ ಅವರದ್ದೇ ಅದ್ದಂತಹ ಆಸ್ತಿಗಳಿವೆ ಎಂದರೆ ಸರಿ.

ಈ ವ್ಯಾಜ್ಯದಲ್ಲಿ 2ನೇ ಪ್ರತಿವಾದಿ ಏನು ಪ್ರತಿರಕ್ಷಣೆ ತೆಗೆದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನಾನು ಸಾಕ್ಷ್ಯ ನುಡಿಯುವ ಮುಂಚಿತವಾಗಿ ಪ್ರತಿವಾದಿಯರು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ಅದರಲ್ಲಿನ ಸಂಗತಿಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ. ವ್ಯಾಜ್ಯದ ಭೂಮಿಗೆ ಸಂಬಂಧಿಸಿದಂತೆ ಆರ್‌ಟಿಸಿ ಯಾರ ಹೆಸರಿನಲ್ಲಿದೆಂಬುದು ಗೊತ್ತಿಲ್ಲ. ವಾದಪತ್ರದಲ್ಲಿ ದಾವಾಸ್ತಿ ನನ್ನ ಅಣ್ಣನ ಹೆಸರಿಗೆ ಯಾವ ಅಧಾರದಲ್ಲಿ ಬಂದಿರುತ್ತದೆಂಬುದು ಹೇಳಿರುತ್ತೇನೆಂಬುದು ನನಗೆ ಗೊತ್ತಿಲ್ಲ. ಸಾಕ್ಷ್ಯ ಹೇಳುವ ಮುಂಚಿತವಾಗಿ ನಾನು ವಾದಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. 2ನೇ ಪ್ರತಿವಾದಿ ದಾವಾಸ್ತಿಯನ್ನು ಕ್ರಯಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೆಂಬುದಾಗಿ ಹೇಳಿರುವುದನ್ನು ನಾನು ತಿಳಿದುಕೊಂಡಿರುತ್ತೇನೆ. ಕ್ರಯಪತ್ರದ ದಾಖಲೆಯಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಾವಾಸ್ತಿಯು ಕ್ರಯಪತ್ರದ ಅಧಾರದ ಮೇಲೆ 2ನೇ ಪ್ರತಿವಾದಿಗೆ ಆಗಿರುತ್ತದೆ ಎಂದರೆ ಸರಿ. ಆ ಆಸ್ತಿಯ ತೀರುವೆಗಳನ್ನು 4 ವರ್ಷದ ಹಿಂದಿನವರೆಗೆ ನಾವೇ ಪಾವತಿ ಮಾಡುತ್ತಿದ್ದೆವು. ಅದಕ್ಕೂ ಮೊದಲಿನಿಂದಲೂ 2ನೇ ಪ್ರತಿವಾದಿ ಹೆಸರಿನಲ್ಲಿಯೇ ಇತ್ತು, 4 ವರ್ಷದ ಹಿಂದಿನವರೆಗೂ ಮಹಾಬಲೇಶ್ ಭಟ್‌ರವರೇ 2ನೇ ಪ್ರತಿವಾದಿ ಹೆಸರಿನಲ್ಲಿ ಕಂದಾಯವನ್ನು ಪಾವತಿಸುತ್ತಿದ್ದರು. ಆ ಜಮೀನಿನಲ್ಲಿ ಕಟ್ಟಡವಿದೆ. ಆ ಕಟ್ಟಡವನ್ನು 2ನೇ ಪ್ರತಿವಾದಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಟ್ಟಡ ಕಟ್ಟುವ ಪರವಾನಿಗೆ ಎಲ್ಲಾ 2ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ. ಆ ಕಟ್ಟಡ ಕಟ್ಟಿ ಸುಮಾರು 25 ವರ್ಷಗಳಾಗಿರಬಹುದು. ಆ ಕಟ್ಟಡದ ತೀರುವೆ ಕೂಡಾ 2ನೇ ಪ್ರತಿವಾದಿಯೇ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ, ನಾನೇ 2ನೇ ಪ್ರತಿವಾದಿ ಹೆಸರಿನಲ್ಲಿ ಕಟ್ಟುತ್ತಿದ್ದೇನೆ. ಈ ಬಗ್ಗೆ ದಾಖಲೆಗಳಿವೆ. ವ್ಯಾಜ್ಯದ ಆಸ್ತಿಗಳು ಒಟ್ಟಾಗಿವೆ. ಕ್ರಯಪತ್ರವಾಗುವ ಸಮಯದಲ್ಲಿ 1ನೇ ವಾದಿ ಇದ್ದರು. ಅದೇ ರೀತಿ ತಂದೆ ತಾಯಿ ಎಲ್ಲರೂ ಇದ್ದರು. ಕ್ರಯಪತ್ರದಲ್ಲಿ 2ನೇ ಪ್ರತಿವಾದಿ ಹೆಸರಿನಲ್ಲಿ ಎಲ್ಲರ ಪರವಾಗಿ ಖರೀದಿಸಲಾಗಿದೆಂದು ಹೇಳುವ ಬಗ್ಗೆ ಒಕ್ಕಣೆ ಇರುವುದಿಲ್ಲ, ಆ ಆಸ್ತಿಯನ್ನು ಜೀವಂತವಾಗಿದ್ದ ತಂದೆಯವರ

ಹೆಸರಿನಲ್ಲಿ ಖರೀದಿಸಲು ಯಾವುದೇ ಆಕ್ಷೇಪಣೆ ಇರುವುದಿಲ್ಲ. ಅವರು ವೃದ್ದರಾಗಿದ್ದರು. ನನ್ನ ತಂದೆಯವರು ಕ್ರಯಪತ್ರವಾದ 7 ವರ್ಷಗಳ ನಂತರ ತೀರಿಕೊಂಡಿರುತ್ತಾರೆ. 1ನೇ ವಾದಿ ಕೃಷ್ಣಭಟ್‌ರವರ ಹೆಸನರಿಲ್ಲಿ ಖರೀದಿಸಲು ಆಕ್ಷೇಪಣೆ ಇರಲಿಲ್ಲ. 2ನೇ ಪ್ರತಿವಾದಿ ಹೊರತುಪಡಿಸಿ ಉಳಿದ ಪ್ರತಿವಾದಿಗಳ ಹೆಸರಿನಲ್ಲಿ ಖರೀದಿಸಲು ಆಕ್ಷೇಪಣೆ ಇರಲಿಲ್ಲ. ಕ್ರಯಪತ್ರದಲ್ಲಿ ಬರೆದಿರುವ ಒಕ್ಕಣೆಗಳನುಸಾರ ಆ ದಾಖಲೆಯ ಮುಖಾಂತರ ಖರೀದಿಸಿದ ಆಸ್ತಿಯ ಸ್ವಾಧೀನವನ್ನು 2ನೇ ಪ್ರತಿವಾದಿಗೆ ನೀಡಲಾಗಿರುತ್ತದೆ ಎಂದರೆ ಸರಿ. ಆದರೆ ಖರೀದಿಯ ಮೂಲ ದಾಖಲೆ ನನ್ನ ಹಿರಿಯ ಸಹೋದರನ ಬಳಿಯಲ್ಲಿಯೇ ಇತ್ತು. 2ನೇ ಪ್ರತಿವಾದಿ ಆ ಮೂಲ ದಾಖಲೆ ನಮ್ಮ ಬಳಿ ಹೇಗೆ ಬಂದಿತ್ತು ಎನ್ನುವ ಬಗ್ಗೆ ಅವರು ನೀಡಿದ ಜವಾಬು ನೋಟಿಸಿನಲ್ಲಿ ತಿಳಿಸಿರುತ್ತಾರೆ ಆ ವಿಷಯ ನನಗೆ ಗೊತ್ತಿದೆ. ಅದರಲ್ಲಿ ಅಲ್ಮೆರಾದಿಂದ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ ಅದು ಸುಳ್ಳು. ಈ ಬಗ್ಗೆ ವಾದಪತ್ರದಲ್ಲಿ ಬರೆಯಬೇಕೆಂದು ನಮ್ಮ ವಕೀಲರಿಗೆ ಹೇಳಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. ಈ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಮೂದಿಸಬೇಕೆಂದು ಹೇಳಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. 2ನೇ ಪ್ರತಿವಾದಿ ಖರೀದಿಸಿದ ಆಸ್ತಿಯ ಮೂಲ ಪ್ರತಿಯನ್ನು ನಾವು ಅಲ್ಮೆರಾದಿಂದ ತೆಗೆದುಕೊಂಡು ಹೋಗಿರುತ್ತೇವೆಂದು ಹೇಳುವುದು ಸುಳ್ಳು. ವ್ಯಾಜ್ಯ ಸಲ್ಲಿಸುವ ಪೂರ್ವದಲ್ಲಿ ನಾವೆಲ್ಲಾ ಅಣ್ಣ ತಮ್ಮಂದಿರು ನೋಟಿಸ್‌ನ್ನು ಮೈಸೂರಿನ ವಕೀಲರ ಮುಖಾಂತರ ಕಳುಹಿಸಿರುತ್ತೇವೆ. ಅದರ ಪ್ರತಿ ನಮ್ಮ ಬಳಿ ಇದೆ. ಆ ನೋಟಿಸ್‌ಗೆ 2ನೇ ಪ್ರತಿವಾದಿ ಜವಾಬು ನೀಡಿರುತ್ತಾರೆ. ಸಾಕ್ಷಿಗೆ ಜವಾಬು ನೋಟಿಸಿನ ಪ್ರತಿಯನ್ನು ತೋರಿಸಿ ಇದು 2ನೇ ಪ್ರತಿವಾದಿ ನೀಡಿದ ಜವಾಬು ನೋಟಿಸ್‌ನ ಪ್ರತಿ ಎಂದು ಕೇಳಲಾಗಿ ಸಾಕ್ಷಿ ಒಪ್ಪಿರುತ್ತಾರೆ. ಪಾಟೀ ಸವಾಲಿನಲ್ಲಿ ಒಪ್ಪಿರುವ ಕಾರಣ ಅದನ್ನು ನಿಡಿ-1 ಎಂದು ಗುರ್ತಿಸಲಾಯಿತು. ರಾಮಮೂರ್ತಿ ಎಂದರೆ 3ನೇ ಪ್ರತಿವಾದಿಯವರ ಗಂಡ ಅಂದರೆ ನನ್ನ ಭಾವಾ. ಅವರು ತೀರಿಕೊಂಡಿರುತ್ತಾರೆ. ವ್ಯಾಜ್ಯದ ಕಟ್ಟಡದ ಡೋರ್ ನಂಬರ್ ಹೇಳಲು ನನಗೆ ಜ್ಞಾಪಕವಿಲ್ಲ. ವ್ಯಾಜ್ಯದ ಜಮೀನು 2ನೇ ಪ್ರತಿವಾದಿಯವರ ಸ್ವಂತ ಆಸ್ತಿ ಎಂದರೆ ಸುಳ್ಳು. 2ನೇ ಪ್ರತಿವಾದಿ ತನ್ನ ಸ್ವಂತ ಉತ್ಪತ್ತಿಯಿಂದ ದಾವಾಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. 2ನೇ ಪ್ರತಿವಾದಿ

1961ರಿಂದ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಿರಂತರವಾಗಿ ಉಪನ್ಯಾಸಕರಾಗಿ ವೃತ್ತಿ ಮಾಡಿಲ್ಲ. ಅಂದಾಜು 1965-66ರಲ್ಲಿ ಮೈಸೂರಿನಲ್ಲಿ ಎಂಎಸ್‌ಸಿ ಮಾಡುತ್ತಿದ್ದರು.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

**ಪ್ರ.ದ.ಸಿ.ನ್ಯಾ.(ಜೆಎಂಎಫ್‌ಸಿ)., ಬಂಟ್ವಾಳ, ದ.ಕ.**